155 ನೇ ಅ ನಿ-72 = (28)

4RR
2204

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದ ರಾಜು ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 28 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ಸರ್ಕಾರಿ ಕಚೇರಿಗಳ ವಿದ್ಯುತ್ ಬಿಲ್ ಪಾವತಿಗೆ ಎದುರಾದ ಅನುದಾನದ ಕೊರತೆಯಿಂದ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಕೋಟ್ಯಂತರ ರೂ. ವಿದ್ಯುತ್ ಶುಲ್ಕ ಪಾವತಿ ಬಾಕಿ ಉಳಿದುಕೊಂಡಿದೆ. ಬಾಕಿ ಶುಲ್ಕ ಪಾವತಿಸದ ಕಚೇರಿಗಳಿಗೆ ನೋಟಿಸ್ ನೀಡಿ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿವೆ. ಇದರಿಂದ ಸರ್ಕಾರಿ ಕಚೇರಿಗಳಲ್ಲಿ ಜನರಿಗೆ ಅಗತ್ಯ ಸೌಲಭ್ಯಗಳು ಸಕಾಲದಲ್ಲಿ ದೊರೆಯದೆ ಜನರಿಗೆ ಅಗತ್ಯ ಸೌಲಭ್ಯಗಳು ಸಕಾಲದಲ್ಲಿ ದೊರೆಯದೆ ಜನರಿಗೆ ಸಂಕಷ್ಟ ತಂದೊಡ್ಡಿದೆ. ರಾಜ್ಯದ ಬೆಸ್ಕಾಂ, ಮೆಸ್ಕಾಂ, ಸೆಸ್ಕಾಂ, ಹೆಸ್ಕಾಂ, ಜೆಸ್ಕಾಂಗಳಿಗೆ 7,467 ಕೋಟಿ ರೂ. ವಿದ್ಯುತ್ ಶುಲ್ಕವನ್ನು ಸರ್ಕಾರಿ ಕಚೇರಿಗಳು ಬಾಕಿ ಉಳಿಸಿಕೊಂಡಿರುವುದರಿಂದ ಈ ವಿಷಯದ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆದಿರುವ ಬಗ್ಗೆ.

* * * * *

**ಉತ್ತರ**:- ಸರ್ಕಾರದ ವಿವಿಧ ಇಲಾಖೆಗಳು / ಸಂಸ್ಥೆಗಳು ನಿಗಧಿತ ಅವಧಿಯೊಳಗೆ ಮಾಸಿಕ ವಿದ್ಯುತ್ ಶುಲ್ಕವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸದಿರುವುದರಿಂದ ದಿನಾಂಕ: 31.12.2024 ರ ಅಂತ್ಯಕ್ಕೆ ಒಟ್ಟು ರೂ.8,413.72/- ಕೋಟಿಗಳು ಬಾಕಿ ಇರುತ್ತದೆ. ಸದರಿ ಬಾಕಿ ಮೊತ್ತವನ್ನು ಪಾವತಿಸುವಂತೆ ವಿದ್ಯುತ್ ಸರಬರಾಜು ಕಂಪನಿಗಳು ಸರ್ಕಾರದ ಇಲಾಖೆ / ಸಂಸ್ಥೆಗಳೊಂದಿಗೆ ನಿರಂತರವಾಗಿ ಪತ್ರ ವ್ಯವಹಾರ ಹಾಗೂ ಖುದ್ದಾಗಿ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿ ಮಾಡಿ ಬಾಕಿ ಮೊತ್ತವನ್ನು ಪಾವತಿಸಲು ಕೋರುತ್ತಿರುತ್ತವೆ.

**ವಿವಿಧ ಸರ್ಕಾರಿ ಇಲಾಖೆ / ಸಂಸ್ಥೆಗಳ ಕಳೆದ 2 ವರ್ಷಗಳ ವಿದ್ಯುತ್ ಶುಲ್ಕದ ಬೇಡಿಕೆ ಮತ್ತು ವಸೂಲಾತಿ ವಿವರಗಳು ಈ ಕೆಳಕಂಡಂತಿದೆ.**

ರೂ. ಕೋಟಿಗಳಲ್ಲಿ

| ಕ್ರ. ಸಂ | ಸರ್ಕಾರಿ ಇಲಾಖೆ/ ಸಂಸ್ಥೆಯ ಹೆಸರು | 2023-24 ರ ಸಾಲಿನ | | | 2024-25 ರ ಸಾಲಿನ (ಡಿಸೆಂಬರ್-2024 ರ ಅಂತ್ಯದವರೆಗೆ) | | | ಡಿಸೆಂಬರ್ -2024 ರ ಅಂತ್ಯದ ಬಾಕಿ |
|---|---|---|---|---|---|---|---|---|
| | | ಬೇಡಿಕೆ | ವಸೂಲಾತಿ | ಶೇ. ವಸೂಲಾತಿ | ಬೇಡಿಕೆ | ವಸೂಲಾತಿ | ಶೇ. ವಸೂಲಾತಿ | |
| 1 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 3,128.00 | 599.67 | 19.17 | 2299.40 | 458.76 | 19.95 | 4222.96 |
| 2 | ನಗರಾಭಿವೃದ್ಧಿ ಇಲಾಖೆ | 2,499.45 | 2,109.29 | 84.39 | 1922.80 | 1532.05 | 79.68 | 2329.31 |
| 3 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | 127.04 | 166.04 | 130.70 | 103.04 | 46.61 | 45.23 | 350.94 |
| 4 | ಬೃಹತ್ ನೀರಾವರಿ ಇಲಾಖೆ | 653.40 | 284.56 | 43.55 | 671.70 | 42.46 | 6.32 | 1187.56 |
| 5 | ಸಣ್ಣ ನೀರಾವರಿ ಇಲಾಖೆ | 127.91 | 101.66 | 79.48 | 107.01 | 79.13 | 73.95 | 114.74 |
| 6 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | 195.87 | 196.57 | 100.36 | 156.21 | 124.27 | 79.55 | 78.07 |
| 7 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 75.36 | 66.95 | 88.84 | 62.49 | 53.04 | 84.88 | 35.15 |
| 8 | ಇತರೆ ಸರ್ಕಾರಿ ಇಲಾಖೆಗಳು | 275.49 | 253.84 | 92.14 | 219.95 | 200.07 | 90.96 | 94.99 |
| | **ಒಟ್ಟು** | **7,082.52** | **3,778.58** | **53.35** | **5,542.60** | **2,536.39** | **45.76** | **8413.72** |

ವಿದ್ಯುತ್ ಸರಬರಾಜು ಕಂಪನಿಗಳು ಈಗಾಗಲೇ ತೀವ್ರ ಆರ್ಥಿಕ ಸಂಕಷ್ಟಕ್ಕೊಳಗಾಗಿರುವುದರಿಂದ ಹಾಗೂ ವಿದ್ಯುತ್ ಖರೀದಿ ವೆಚ್ಚವನ್ನು ನಿಯಮಿತ ಅವಧಿಯೊಳಗೆ ವಿದ್ಯುತ್ ಉತ್ಪಾದಕರಿಗೆ ಪಾವತಿಸಬೇಕಾಗಿರುವುದರಿಂದ ಬಾಕಿ ವಿದ್ಯುತ್ ಶುಲ್ಕವನ್ನು ವಸೂಲಿ ಮಾಡುವ ಸಂಬಂಧ ಕ.ವಿ.ನಿ ಆಯೋಗದ ವಿದ್ಯುತ್ ಸರಬರಾಜು ನಿಬಂಧನೆಗಳಂತೆ ಬಾಕಿ ವಿದ್ಯುತ್ ಶುಲ್ಕದ ಮೊತ್ತವನ್ನು ನಿಗಧಿತ ಅವಧಿಯೊಳಗೆ ಪಾವತಿಸದಿರುವ ಗ್ರಾಹಕರ ಸ್ಥಾವರಗಳಿಗೆ ಸೂಚನಾ ಪತ್ರಗಳನ್ನು ನೀಡಿ ವಿದ್ಯುತ್ ಸಂಪರ್ಕ ಕಡಿತಗೊಳಿಸಬೇಕಾಗಿದ್ದರೂ ಸಾರ್ವಜನಿಕ ಹಿತ ದೃಷ್ಟಿಯಿಂದ ಅತೀ ಅವಶ್ಯಕ ಸೇವೆ ನೀಡುತ್ತಿರುವ ಇಲಾಖೆ / ಸಂಸ್ಥೆಗಳನ್ನು ಹೊರತುಪಡಿಸಿ ಇತರೆ ಕಛೇರಿಗಳ ವಿದ್ಯುತ್ ಸಂಪರ್ಕ ನಿಲುಗಡೆಗೊಳಿಸುವ ಪ್ರಯತ್ನ ನಡೆಸುತ್ತಿವೆ.

ಮುಂದುವರೆದು, ಅತೀ ಹೆಚ್ಚಿನ ಬಾಕಿ ಉಳಿಸಿಕೊಂಡಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯ ಗ್ರಾಮ ಪಂಚಾಯಿತಿಗಳ ಕುಡಿಯುವ ನೀರು ಬೀದಿ ದೀಪ ಸ್ಥಾವರಗಳ ದಿನಾಂಕ: 01.04.2015 ರಿಂದ 31.03.2023 ರವರೆಗಿನ ಬಾಕಿ ವಿದ್ಯುತ್ ಶುಲ್ಕದ ಮೊತ್ತದಲ್ಲಿನ ಅಸಲು ಮೊತ್ತ ರೂ.5,257.70 ಕೋಟಿಗಳನ್ನು ಸರ್ಕಾರದ ಖಾತರೀ ಮೂಲಕ ತೀರುವಳಿ ಮಾಡಿರುತ್ತದೆ. ಇದರಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸ್ವಲ್ಪ ಮಟ್ಟಿನ ಆರ್ಥಿಕ ಅನುಕೂಲವಾಗಿರುತ್ತದೆ.

ಆದ್ದರಿಂದ, ವಿವಿಧ ಸರ್ಕಾರಿ ಇಲಾಖೆ / ಸಂಸ್ಥೆಗಳು ತಮಗೆ ಅವಶ್ಯವಿರುವ ಆಯಾ ವರ್ಷದ ವಿದ್ಯುತ್ ಶುಲ್ಕದ ಪೂರ್ಣ ಬೇಡಿಕೆ ಅನುದಾನವನ್ನು ಆಯಾ ಇಲಾಖೆ / ಸಂಸ್ಥೆಗಳೇ ಸರ್ಕಾರದಿಂದ ಬಿಡುಗಡೆಗೊಳಿಸಿಕೊಂಡು ವಿ.ಸ.ಕಂಪನಿಗಳಿಗೆ ನಿಯಮಿತವಾಗಿ ಪಾವತಿಸಿದಲ್ಲಿ, ಬಾಕಿ ವಿದ್ಯುತ್ ಶುಲ್ಕದ ಮೊತ್ತ ಕಡಿಮೆಯಾಗುತ್ತದೆ. ಇದರಿಂದ ವಿ.ಸ.ಕಂಪನಿಗಳ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಅನುಕೂಲವಾಗುತ್ತದೆ.

ಸಂಖ್ಯೆ: ಎನರ್ಜಿ 33 ಇಬಿಎಸ್ 2025

(ಕೆ.ಜೆ.ಜಾರ್ಜ್) 4/3/25
ಇಂಧನ ಸಚಿವರು